ಪ್ರಧಾನ ಜಿಲ್ಲಾ ಮತ್ತು ಸೆಷನ್ಸ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ

Spl.NDPS 9/2022

| | | | | |
|---|---|---|---|---|
| ಸಾಕ್ಷಿದಾರರ ಹೆಸರು | ಃ | ವಸಂತ ಪಿ | ಪಿ.ಡಬ್ಲ್ಯೂ | 4 |
| ತಂದೆಯ ಹೆಸರು | ಃ | ಪರಶುರಾಮಪ್ಪ | ಸಿ.ಡಬ್ಲ್ಯೂ | 3 |
| ವಯಸ್ಸು | ಃ | 52 ವರ್ಷ | | |
| ಉದ್ಯೋಗ | ಃ | ಕಂದಾಯ ಅಧಿಕಾರಿ, ರಾಣೆಬೆನ್ನೂರು | | |
| ವಾಸ ಸ್ಥಳ | ಃ | ಹರಿಹರ | | |

ದಿ.30.01.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.
ಕಲಂ 299 ಸಿ.ಆರ್.ಪಿ.ಸಿ. ಅಡಿಯಲ್ಲಿ ಸಾಕ್ಷ್ಯವನ್ನು ದಾಖಲಾಯಿಸಲಾಯಿತು.
<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ **(ಮಂಜುನಾಥ ಬಿ.)** ಃ</u>

1. 2020 ನೇ ಸಾಲಿನಲ್ಲಿ ಹರಿಹರ ನಗರಸಭೆ ಕಛೇರಿಯಲ್ಲಿ ನಾನು ಕಂದಾಯ ನಿರೀಕ್ಷಕರಾಗಿ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೆ.

2. ನಿಪಿ.8 ರಲ್ಲಿ ಸಾಕ್ಷಿಯು ತನ್ನ ಸಹಿ ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿ ನಿಪಿ.**8(ಸಿ)** ಎಂದು ಗುರುತಿಸಲಾಯಿತು. ದಿನಾಂಕ 12.09.2020 ರಂದು ಹರಿಹರ-ಶಿವಮೊಗ್ಗ ರಾಜ್ಯ ಹೆದ್ದಾರಿ ಭರಣಿ ಹೋಟೆಲ್ ಮುಂಬಾಗದಲ್ಲಿ ಪಂಚನಾಮೆ ಮಾಡುವ ಸಂದರ್ಭದಲ್ಲಿ ನಿಪಿ.8 ಕ್ಕೆ ಸಹಿ ಮಾಡಿರುತ್ತೇನೆ. ಗಾಂಜಾ ಪ್ರಕರಣದಲ್ಲಿ ಪಂಚನಾಮೆ ಮಾಡಲು ಸಹಕರಿಸುವಂತೆ ಪೋಲೀಸರು ನನಗೆ ಮತ್ತು ಚಾಸಾ.2 ರವರಿಗೆ ನೋಟೀಸು ಜಾರಿ ಮಾಡಿದ್ದರು.

3. ನನ್ನನ್ನು ಮತ್ತು ಚಾಸಾ.2 ರವರನ್ನು ಪೋಲೀಸರು ಅವರ ವಾಹನದಲ್ಲಿ ಹರಿಹರ-ಶಿವಮೊಗ್ಗ ರಾಜ್ಯ ಹೆದ್ದಾರಿ ಭರಣಿ ಹೋಟೆಲ್ ಮುಂಬಾಗಕ್ಕೆ ಕರೆದುಕೊಂಡು ಹೋಗಿದ್ದರು. ಅಲ್ಲಿ ಒಂದು ಆಟೋ ಜೊತೆಗೆ 3 ಜನರು ಇದ್ದರು. ಅವರ ಕೈಯಲ್ಲಿ ಕೆಂಪು ಬಣ್ಣದ್ದು ಮತ್ತು ನೀಲಿ ಬಣ್ಣದ್ದು ಎರಡು ಬ್ಯಾಂಗ್ ಇದ್ದವು. ಅವರನ್ನು ವಿಚಾರಿಸಲಾಗಿ ಅವರುಗಳು ತಮ್ಮ ಹೆಸರು ರಾಹುಲ್, ಮಲ್ಲಿಕಾರ್ಜುನ್ ಮತ್ತು ಪ್ರಮೋದ್ ಎಂದು ತಿಳಿಸಿದರು.

4. 1 ನೇ ಆರೋಪಿ ರಾಹುಲ್ ಬಳಿ ಕೆಂಪು ಬಣ್ಣದ ಬ್ಯಾಗ್ ಇತ್ತು. 2 ನೇ ಆರೋಪಿಯ ಬಳಿ ನೀಲಿ ಬಣ್ಣದ ಬ್ಯಾಗು ಇತ್ತು. ಸದರಿ ಎರಡು ಬ್ಯಾಗುಗಳನ್ನು ತೆರೆದು ನೋಡಲಾಗಿ ಸೊಪ್ಪು, ಹೂವು, ಕಾಂಡ ಇರುವುದು ಕಂಡು ಬಂತ್ತು. ಎರಡು ಬ್ಯಾಗುಗಳಲ್ಲಿ ತಲಾ 2 ಕೆಜಿ 45 ಗ್ರಾಂ ಗಾಂಜಾಗಳು ಇದ್ದವು.

5. ಇನ್ನೊಬ್ಬ ವ್ಯಕ್ತಿ (3 ನೇ ಆರೋಪಿ) ಯ ಬಳಿ 11 ಪ್ಲಾಸ್ಟಿಕ್ ಕವರ್ ಗಳು ಇದ್ದವು. ಅವುಗಳನ್ನು ಆಟೋ ಸಮೇತ ಪಂಚನಾಮೆ ಮೂಲಕ ಅಮಾನತ್ತು ಪಡಿಸಿಕೊಂಡು ಮಧ್ಯಾಹ್ನ 1.30 ಗಂಟೆಯಿಂದ 3.30 ಗಂಟೆಯವರೆಗೆ ಅಮಾನತ್ತು ಪಂಚನಾಮೆ ಕ್ರಮ ಜರುಗಿಸಲಾಯಿತು.

6. ನಿಪಿ.9 ರ ಪೊಟೋದಲ್ಲಿ ಸಾಕ್ಷಿಯು ತನ್ನ ಭಾವಚಿತ್ರ ಇರುವುದಾಗಿ ಹಾಗೂ ಚಾಸಾ.2, ತಹಶಿಲ್ದಾರರು, ಪೋಲೀಸ್ ಸಿಬ್ಬಂದಿಗಳು ಇರುವುದು ಹಾಗೂ ಆಟೋ ಇರುವುದು ಕಂಡು ಬರುತ್ತದೆ. ನಿಪಿ.10 ರ ಪೊಟೋ ದಲ್ಲಿ ಮೂವರು ಆರೋಪಿತರು ಇರುವುದು ಕಂಡು ಬರುತ್ತದೆ.

7. ನಿಪಿ.11 ರ ಪೊಟೋದಲ್ಲಿ ಗಾಂಜಾವನ್ನು ತೂಕ ಮಾಡುತ್ತಿರುವುದು ಕಂಡು ಬರುತ್ತದೆ. ನಿಪಿ.12 ರ ಪೊಟೋದಲ್ಲಿ ಆಟೋ ಸಮೇತ ಆರೋಪಿತರು ಕಾಣಿಸುತ್ತಾರೆ. ನಿಪಿ.13 ರಿಂದ ನಿಪಿ.18 ಪೊಟೋಗಳು ಜಪ್ತು ಪಂಚನಾಮೆ ಕಾಲದಲ್ಲಿ ತೆಗೆದ ಪೊಟೋಗಳು ಆಗಿರುತ್ತವೆ.

8. ಈಗಾಗಲೇ ಎಂ.ಓ.1 ರಿಂದ 4 ಎಂದು ಗುರುತಿಸಲಾದ ವಸ್ತುಗಳನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ಆರೋಪಿತರನ್ನು ಪುನಃ ನೋಡಿದಲ್ಲಿ ಗುರುತಿಸುತ್ತೇನೆ.

<u>ಪಾಟೀ ಸವಾಲು ಃ</u> ಪ್ರಸ್ತುತ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ .

ಪ್ರಧಾನ ಜಿಲ್ಲಾ ಮತ್ತು ಸೆಷನ್ಸ ನ್ಯಾಯಾಧೀಶರು,
ದಾವಣಗೆರೆ.